# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 27.12.2017 ರಂದು ಪೂರ್ವಾಹ್ನಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2017ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಡಾವಳಿಗಳು.

ಉಪಸ್ಥಿತ ಸದಸ್ಯರು

ಅನುಪಸ್ಥಿತ ಸದಸ್ಯರು:

ಮಾನ್ಯ ಕುಲಪತಿಯವರು ಪ್ರಾರಂಭದಲ್ಲಿಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

## ಪ್ರಾರಂಭಿಕ

1. ಸಭೆಯುಆರಂಭದಲ್ಲಿ, ಮಂಗಳೂರು ವಿಶ್ವವಿದ್ಯಾನಿಲಯದವ್ಯವಹಾರ ಆಡಳಿತ ವಿಭಾಗದಲ್ಲಿಕಾರ್ಯನಿರ್ವಹಿಸುತ್ತಿದ್ದಶ್ರೀ ಟಿ. ಮೋಹನ್, ಗ್ರೂಪ್'ಡಿ' ಸಿಬ್ಬಂದಿ ಇವರು ದಿನಾಂಕ 27.12.2017 ರಂದುಅಕಾಲ ನಿಧನರಾದ ಹಿನ್ನೆಲೆಯಲ್ಲಿ ಮೃತರಗೌರವಾರ್ಥ ಸಂತಾಪ ಸೂಚಕವಾಗಿ ಎರಡು ನಿಮಿಷಗಳ ಮೌನ ಪ್ರಾರ್ಥನೆಯನ್ನುಕೈಗೊಂಡು ಶ್ರದ್ಧಾಂಜಲಿಯನ್ನು ಸಲ್ಲಿಸಿತು.

2. ಮಾನ್ಯ ಕುಲಪತಿಯವರು, ವಿಶ್ವವಿದ್ಯಾನಿಲಯದ ನೂತನ ಕುಲಸಚಿವರಾದ ಪ್ರೊ. ಬಿ.ಎಸ್. ನಾಗೇಂದ್ರ ಪ್ರಕಾಶ್, ಪ್ರಾಧ್ಯಾಪಕರು, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಯುನಿವರ್ಸಿಟಿ ವಿಶ್ವೇಶ್ವರಯ್ಯಕಾಲೇಜ್ಆಫ್ಇಂಜಿನಿಯರಿಂಗ್, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಸರ್ಕಾರದಆದೇಶ ಸಂ.ಇಡಿ99 ಯುಡಿವಿ 2017 ದಿನಾಂಕ 01.12.2017ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ದಿನಾಂಕ 05.12.2017ರಿಂದ ನೇಮಕಗೊಂಡಿರುವ ವಿಚಾರವನ್ನು ಸಭೆಗೆ ತಿಳಿಸಿ ನೂತನ ಕುಲಸಚಿವರ ಪರಿಚಯವನ್ನು ನೀಡಿ ಸಭೆಗೆ ಸ್ವಾಗತಿಸಿದರು.

3. ದಿನಾಂಕ 21.06.2016ರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿಕಾರ್ಯ ನಿರ್ವಹಿಸಿದ್ದ ಪ್ರೊ. ಕೆ.ಎಂ.ಲೋಕೇಶ್, ಇವರನ್ನು ಸರ್ಕಾರದ ಪತ್ರ ಸಂಖ್ಯೆಇಡಿ 99 ಯುಡಿವಿ 2017 ದಿನಾಂಕ 01.12.2017ರಂತೆ ಕುಲಸಚಿವರಕರ್ತವ್ಯದಿಂದ ಬಿಡುಗಡೆಗೊಳಿಸಲಾದ ವಿಷಯವನ್ನು ಸಿಂಡಿಕೇಟು ಸಭೆಗೆ ತಿಳಿಸಿ ಸದರಿಅವಧಿಯಲ್ಲಿಅವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ದಾಖಲಿಸಲಾಯಿತು.

## ಪ್ರಸ್ತಾವಿಕ

1. ಮಾನ್ಯ ಕುಲಪತಿಯವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆUI Green Metric World Rankingನಲ್ಲಿಭಾರತದಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ 3ನೇ ಸ್ಥಾನವನ್ನು, QSRanking ನಲ್ಲಿಕರ್ನಾಟಕರಾಜ್ಯದಲ್ಲಿ 3ನೇಯ ಸ್ಥಾನ ದೊರಕಿರುವುದನ್ನು ಹಾಗೂ ವಿಶ್ವವಿದ್ಯಾನಿಲಯದh-index 61 ಕ್ಕೆ ಏರಿದ್ದನ್ನು ಸಭೆಗೆ ತಿಳಿಸಿ, ಶ್ಲಾಘಿಸಿದರು.

2. ಸಭೆಯಲ್ಲಿ ಮಾನ್ಯ ಸಿಂಡಿಕೇಟು ಸದಸ್ಯರೊಬ್ಬರು ಮಾತನಾಡುತ್ತಾ ವಿಶ್ವವಿದ್ಯಾನಿಲಯದಲ್ಲಿ ಸ್ಯಾನಿಟರಿಇನ್ಸ್‌ಪೆಕ್ಟರ್‌ಹುದ್ದೆಯ ಪ್ರಭಾರ ವಹಿಸಿಕೊಂಡಿರುವ ಶ್ರೀ ಹರೀಶ್ ಪೂಜಾರಿಇವರಬಗ್ಗೆ ಪ್ರಸ್ತಾಪಿಸಿದರು. ಈ ಬಗ್ಗೆ ಮಾನ್ಯ ಕುಲಪತಿಯವರು, ಸದರಿಯವರನ್ನುತಕ್ಷಣದಿಂದಲೇಹೆಚ್ಚುವರಿ ಹುದ್ದೆಯಿಂದ ಬಿಡುಗಡೆಗೊಳಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

3. ಆಚಾರ್ಯ ನಾಗಾರ್ಜುನ ವಿಶ್ವವಿದ್ಯಾನಿಲಯ, ಗುಂಟೂರು, ಆಂಧ್ರಪ್ರದೇಶಇವರುಆಯೋಜಿಸಿದ 78ನೇ ಅಖಿಲ ಭಾರತಅಂತರ್‌ವಿಶ್ವವಿದ್ಯಾನಿಲಯಅ್ಯಾತ್ಲೆಟಿಕ್‌ಕೂಟದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವುದ್ವಿತೀಯ ಬಾರಿಗೆಚಾಂಪಿಯನ್ ಆಗಿ ಹೊರ ಹೊಮ್ಮಿದವಿಷಯವನ್ನು ಮಾನ್ಯ ಕುಲಪತಿಯವರು ಸಭೆಯಲ್ಲಿ ತಿಳಿಸಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಪ್ರಶಂಷಿಸಿ ಅಭಿನಂದಿಸಿದರು.

4. ಕ್ರೀಡೆ/ಎನ್‌ಸಿಸಿ/ಎನ್‌ಎಸ್‌ಎಸ್/ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಲಯ/ರಾಷ್ಟ್ರೀಯ/ಅಂತರಾಷ್ಟ್ರೀಯ ಮಟ್ಟಗಳಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸುವ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆಗಳನ್ನು ನಡೆಸಲು ವಿಶ್ವವಿದ್ಯಾನಿಲಯದಿಂದ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದಾಗ ಕುಲಸಚಿವರು (ಪರೀಕ್ಷಾಂಗ) ಇವರು ಸದರಿ ವಿಷಯದ ಬಗ್ಗೆ ಈಗಾಗಲೇ ಎಲ್ಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳ ಪಟ್ಟಿ ಕೇಳಿ ಸುತ್ತೋಲೆಯನ್ನು ಹೊರಡಿಸಲಾಗಿದ್ದು ಪರಿಶೀಲಿಸಿ ಮುಂದಿನ ಕ್ರಮಕ್ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

5. ಹಿಂದೂಸ್ಥಾನ್‌ಇನ್ಸ್ಟಿಟ್ಯೂಟ್‌ಆಫ್‌ಟೆಕ್ನಾಲಜಿಆಂಡ್ ಸೈನ್ಸ್, ಕಂಚಿಪುರಂಇವರು ಆಯೋಜಿಸಿರುವ 33ನೇ ದಕ್ಷಿಣ ವಲಯಯುವಜನೋತ್ಸವ 2017 ಇಲ್ಲಿಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಭಾಗವಹಿಸಿ 3ನೇ ಸ್ಥಾನ ಪಡೆದಿದ್ದು, ಫೆಬ್ರವರಿ 16–20, 2018ರಲ್ಲಿ ರಾಂಚಿ ವಿಶ್ವವಿದ್ಯಾನಿಲಯದಲ್ಲಿ ನಡೆಯುವರಾಷ್ಟ್ರೀಯ ಮಟ್ಟದಯುವಜನೋತ್ಸವದಲ್ಲಿ ಭಾಗವಹಿಸಲು ಆಯ್ಕೆಯಾಗಿರುವುದನ್ನು ಮಾನ್ಯ ಕುಲಪತಿಯವರುಸಭೆಯಲ್ಲಿ ತಿಳಿಸಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಪ್ರಶಂಷಿಸಿ ಅಭಿನಂದಿಸಿದರು.

Iನಡಾವಳಿಗಳ ದೃಢೀಕರಣ

1. ದಿನಾಂಕ 05.12.2017ರಂದು ನಡೆದ 2017ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು: ಸಾ.ಸ.7:13(2017)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ನಿರ್ಣಯ:** ಪ್ರೊ.ಜಿ.ಪಿ.ಶಿವರಾಮ್, ಪ್ರಾಧ್ಯಾಪಕರು, ಸ್ನಾತಕೋತ್ತರಪತ್ರಿಕೋದ್ಯಮ ಮತ್ತುಸಮೂಹ ಸಂವಹನಅಧ್ಯಯನ ವಿಭಾಗಇವರ ಮನವಿ ಮೇರೆಗೆ ಪ್ರೊ. ವಹೀದಾ ಸುಲ್ತಾನ ಇವರನ್ನೇ ವಿಭಾಗದಅಧ್ಯಕ್ಷರನ್ನಾಗಿ ಮುಂದುವರಿಸಲು ನಿರ್ಣಯಿಸಲಾಯಿತು.

**II ಅನುಸರಣಾ ವರದಿಯಅನುಮೋದನೆ**

1. ದಿನಾಂಕ 13.10.2017ರಂದು ನಡೆದ ಸಿಂಡಿಕೇಟಿನ 2017ನೇ ಸಾಲಿನ ಆರನೆಯ ಸಾಮಾನ್ಯ ಸಭೆಯಅನುಸರಣಾ ವರದಿಯನ್ನು ಅನುಮೋದಿಸಲಾಯಿತು.
2. ದಿನಾಂಕ 09.11.2017ರಂದು ನಡೆದ ಸಿಂಡಿಕೇಟಿನ 2017ನೇ ಸಾಲಿನ ತೃತೀಯ ವಿಶೇಷ ಸಭೆಯಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು** ಸಾ.ಸ.8:1(2017)

**ವಿಷಯ :** ಸ್ನಾತಕೋತ್ತರಆಂಗ್ಲಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು** ಸಾ.ಸ.8:2(2017)

**ವಿಷಯ :** ಪದವಿಮಟ್ಟದ ಭರತನಾಟ್ಯ, ಕರ್ನಾಟಕ್ ಸಂಗೀತ ಮತ್ತು ಪಾಶ್ಚಾತ್ಯ ಸಂಗೀತ ಹಾಗೂ ಸ್ನಾಕೋತ್ತರ ಭರತನಾಟ್ಯ, ಕರ್ನಾಟಕ್ ಸಂಗೀತ ಸಂಯಕ್ತಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸಂಯುಕ್ತಅಧ್ಯಯನ ಮಂಡಳಿಯನ್ನು ಪುನರ್ರಚಿಸುವಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ: ಸಾ.ಸ.8:3(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟಿನಿಂದ ಅನುಮೋದನೆಗೊಂಡು ಪ್ರಸ್ತುತಜಾರಿಯಲ್ಲಿರುವ ವಕೀಲರಯಾದಿಯನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** ದಿನಾಂಕ 14.01.2018 ರಿಂದಅನ್ವಯವಾಗುವಂತೆ ಮುಂದಿನ 3 ವರ್ಷದಅವಧಿಯವರೆಗೆ ಪ್ರಸ್ತುತಚಾಲ್ತಿಯಲ್ಲಿರುವದರ, ಇತರ ಷರತ್ತುಹಾಗೂ ನಿಬಂಧನೆಗಳಿಗೊಳಪಟ್ಟು ಮುಂದುವರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.ಅಲ್ಲದೆ ಮಾನ್ಯ ಸದಸ್ಯರು ಸೂಚಿಸಿರುವ ಇತರೆಹೆಸರುಗಳನ್ನು ಪ್ರಸ್ತುತಇರುವಯಾದಿಗೆ ಸೇರಿಸಿ ಪಟ್ಟಿಯನ್ನು ಅನುಮೋದಿಸಲಾಯಿತು. ಅವರುಗಳು :

1. ಶ್ರೀ ಉದಯಾನಂದಎ.
2. ಶ್ರೀ ದಿನೇಶ್ ಹೆಗ್ಡೆ. ಉಲ್ಯೆಪಾಡಿ
3. ಶ್ರೀ ಎಮ್.ವಿ.ಶಂಕರ್ ಭಟ್, ಮಂಗಳೂರು

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.8:4(2017)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ"ಪ್ರೊ.ಕೆ.ಕೆ.ವಿಜಯಲಕ್ಷ್ಮಿ ಸ್ಮರಣಾರ್ಥದತ್ತಿಉಪನ್ಯಾಸ ನಿಧಿ"ಸ್ಥಾಪಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.8:5(2017)

ವಿಷಯ : DST-SERB ಪ್ರಾಜೆಕ್ಟ್, ಸೂಕ್ಷ್ಮಾಣುಜೀವವಿಜ್ಞಾನ ವಿಭಾಗ, ಜ್ಞಾನಕಾವೇರಿ, ವಿ. ವಿ. ಸ್ನಾತಕೋತ್ತರಕೇಂದ್ರ, ಚಿಕ್ಕ ಅಳುವಾರ –ಉಪಕರಣಖರೀದಿಗೆ ಸಂಬಂಧಿಸಿದ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

ನಿರ್ಣಯ: ದಿನಾಂಕ 29.11.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ Biosafety ಉಪಕರಣವನ್ನು ರೂ.3,40,000/–, $CO_2$ Incubator ಉಪಕರಣವನ್ನು ರೂ.3,00,000/– ಮತ್ತು Ultra Low Temperatureಉಪಕರಣವನ್ನುರೂ.4,30,000ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.8:6(2017)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯಆವರಣದ'ಸಿ' ಮಾದರಿ ವಸತಿಗೃಹದ ಹಿಂಭಾಗದ ಕೊಳವೆ ಬಾವಿಯಿಂದ ನೀರು ಸರಬರಾಜು ಸಂಪರ್ಕ ಕೊಳವೆಯನ್ನು 400 ಮೀ. ಟ್ರಾಕ್‌ನ ಮೈದಾನದಲ್ಲಿನಟ್ಯಾಂಕ್‌ಗೆ ಅಳವಡಿಸಿ ಟ್ಯಾಂಕ್‌ನಿಂದ ಸ್ಪ್ರಿಂಕರ್‌ಗಳಿಗೆ ನೀರನ್ನುಒದಗಿಸುವಕಾಮಗಾರಿ– ಅಂದಾಜುಪಟ್ಟಿಯಅನುಮೋದನೆಗಾಗಿ.

ನಿರ್ಣಯ: ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.8:7(2017)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ನೀರಿನ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ನೀರಿನಟ್ಯಾಂಕರನ್ನುಖರೀದಿ ಮಾಡುವ ಬಗ್ಗೆ.

ನಿರ್ಣಯ: ಟ್ಯಾಂಕರ್‌ಅನ್ನುವಿವಿಧಅವಶ್ಯಕತೆಗನುಗುಣವಾಗಿ ಬಳಸಿಕೊಳ್ಳುವ ಹಾಗೆವಾಹನ ಖರೀದಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಸದರಿವಾಹನವನ್ನುಟ್ಯಾಂಕರ್ ಅಳವಡಿಸಿ ನೀರು ಪೂರೈಕೆಗೂಮತ್ತುವಿಶ್ವವಿದ್ಯಾನಿಲಯದಆವರಣದಲ್ಲಿರುವತ್ಯಾಜ್ಯಸಂಗ್ರಹಣಾಕಾರ್ಯದಲ್ಲಿಯೂಉಪಯೋಗವಾಗುವಂತೆ ಬಳಸಿಕೊಳ್ಳಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರುಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು | ಕುಲಪತಿಗಳು